## ಸರಿಯಾಗಿದೆ...

'ಮೊಬೈಲ್‌ಗೆ ಏನೂ ಆಗಿಲ್ಲ ಅಜ್ಜಿ, ಎಲ್ಲ ಸರಿಯಾಗಿಯೇ ಇದೆ' ಮೊಬೈಲ್ ರಿಪೇರಿ ಮಾಡುವ ಹುಡುಗ ಅದನ್ನು ಹಿಂದುರುಗಿಸುತ್ತಾ ಹೇಳಿದ.

'ಹಾಗಿದ್ರೇ ಮತ್ಯಾಕೆ ನನ್ನ ಮಗನಿಂದ ಕಾಲ್ ಬರ್ತಾ ಇಲ್ಲ' ಎಂದು ಆ ಮುದುಕಿ ಮುಗ್ಧವಾಗಿ ಕೇಳಿದಳು.



## ಬ್ಯುಸಿಟ್ಯೂನ್

ಅವನು ಅವಳಿಗೆ ಫೋನ್ ಮಾಡಿದ. ಬ್ಯುಸಿಟ್ಯೂನ್ ಕೇಳಿಬರುತ್ತಿತ್ತು. ಮತ್ತೆ ಮತ್ತೆ ಫೋನ್ ಮಾಡಿದಾಗಲು ಅದೇ ರಾಗ ಕೇಳಿಬಂತು. ಆಕಡೆ ಅವಳೂ ಇವನಿಗೆ ಅದೇ ಸಮಯದಲ್ಲಿ ಫೋನ್ ಮಾಡುತ್ತಿದ್ದಳು. ಅವಳಿಗೂ ಬ್ಯುಸಿಟ್ಯೂನ್ ಕೇಳಿಬರುತ್ತಿತ್ತು. ಅನುಮಾನದ ಪಿಶಾಚಿ ಗಹಗಹಿಸಿ ನಕ್ಕಿತು.

★★★

## ತುಂಬಿಸುವುದು

ರಾಜನೊಬ್ಬ ಯೋಗಿಗೆ ಒಂದು ದೊಡ್ಡ ಕೊಠಡಿಯನ್ನು ತೋರಿಸಿ ಕೇಳಿದ: 'ಈ ಕೊಠಡಿಯನ್ನು ಯಾವುದಾದರೂ ವಸ್ತುಗಳಿಂದ ಸಂಪೂರ್ಣವಾಗಿ ತುಂಬಿಸಲು ನಿಮ್ಮಿಂದ ಸಾಧ್ಯವೇ?' ಯೋಗಿ ಮುಗುಳ್ನಕ್ಕು ಒಂದು ದೀಪ ಹಚ್ಚಿ ಅದರೊಳಗಿಟ್ಟ. ದೀಪದ ಬೆಳಕು ಇಡೀ ಕೊಠಡಿಯನ್ನು ತುಂಬಿತು.

★★★

## ಸಂಭ್ರಮ

ಸೋತರೂ ಮುಗುಳ್ನಗುತ್ತಿದ್ದವನ್ನು ನೋಡಿ ಗೆದ್ದವನ ಸಂಭ್ರಮ ಕಡಿಮೆಯಾಯಿತು.

★★★

## ಊರು ತೊರೆದ ಹುಡುಗ

ಏನಾದರೂ ಸಾಧಿಸಬೇಕೆಂಬ ಛಲ ತೊಟ್ಟು ಊರು ಬಿಟ್ಟ ಹುಡುಗ ಮತ್ತೆಂದಿಗೂ ತನ್ನ ಊರಿಗೆ ಮರಳಲೇ ಇಲ್ಲ.

★★★

## ಅಳು

ಮೊದಲು ಸಣ್ಣಪುಟ್ಟ ವಿಷಯಕ್ಕೂ ಅವನು ಅಳುತ್ತಿದ್ದ. ಅಳುತ್ತ ಅಳುತ್ತ ಅವನ ಕಣ್ಣೀರು ಬತ್ತಿಹೋಯಿತು. ಈಗ ಎಲ್ಲರೂ ಅವನನ್ನು ಕಲ್ಲುಹೃದಯದವನು ಎನ್ನುತ್ತಿದ್ದಾರೆ.